# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೬–ಸಿ<br>Part – VI C | ಮೈಸೂರು, ಶುಕ್ರವಾರ, ೨೦, ಫೆಬ್ರವರಿ, ೨೦೨೬ (ಫಾಲ್ಗುಣ, ೦೧, ಶಕವರ್ಷ, ೧೯೪೭)<br>MYSURU, FRIDAY, 20, FEBRUARY, 2026 (PHALGUNA, 01, SHAKAVARSHA, 1947) | ನಂ. ೦೬<br>No. 06 |
|---|---|---|



ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ–571201

ಕಛೇರಿ: 08272–225500
ನಿವಾಸ: 08272–225700
ಫ್ಯಾಕ್ಸ್: 08272–225900
ಈ–ಮೇಲ್:dckodagu@mail.kar.nic.in
ವೆಬ್ ಸೈಟ್: http://www.kodagu.nic.in


---

ಸಂಖ್ಯೆ/ಚುನಾ/(ಪು.ವಿ)/31/2025-26 ದಿನಾಂಕ:20-02-2026

## ಅಧಿಸೂಚನೆ

**ವಿಷಯ:-** ಕೊಡಗು ಜಿಲ್ಲೆಯ ವಿರಾಜಪೇಟೆ ಪುರಸಭೆಯ ವಾರ್ಡ್ ಗಳನ್ನು 2011ರ ಜನಗಣತಿಯ ಆಧಾರದ ಮೇರೆ ಪುನರ್ ವಿಂಗಡಣೆ ಮಾಡುವ ಕುರಿತು.

**ಉಲ್ಲೇಖ:-**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/178/ ಎಂಎಲ್ ಆರ್/2021(ಇ) ದಿನಾಂಕ:23-06-2022.
2. ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/4/ಎಂಎಲ್ಆರ್/2014 ಬೆಂಗಳೂರು ದಿನಾಂಕ:15-02-2014.
3. ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ ಇವರ ಪತ್ರ ಸಂಖ್ಯೆ:ಪ. ಪಂ.ವೀ./ಸಿ-2/ಚು.ವಾ.ಪು.ವಿ/15/2024-25 ದಿನಾಂಕ:03-12-2024.
4. ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ/104/ಟಿಎಂಎಸ್/ 2014 ದಿನಾಂಕ:09-01-2015.
5. ಈ ಕಚೇರಿ ಕರಡು ಅಧಿಸೂಚನೆ ಪತ್ರ ಸಮ ಸಂಖ್ಯೆ ದಿನಾಂಕ:18-08-2025.

******

ಉಲ್ಲೇಖ(1)ರ ಅಧಿಸೂಚನೆಯಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ ಪಟ್ಟಣ ಪಂಚಾಯಿತಿಗೆ ಚೆಂಬೆಬೆಳ್ಳೂರು ಗ್ರಾಮ ಪಂಚಾಯಿತಿಯ ಕುಕ್ಲೂರು ಗ್ರಾಮ ಭಾಗಶಃ ಮತ್ತು ಮಗ್ಗುಲ ಗ್ರಾಮ ಭಾಗಶಃ, ಬಿಟ್ಟಂಗಾಲ ಗ್ರಾಮ ಪಂಚಾಯಿತಿಯ ಅಂಬಟ್ಟಿ ಗ್ರಾಮ ಭಾಗಶಃ, ಆರ್ಜಿ ಗ್ರಾಮ ಪಂಚಾಯಿತಿಯ ಆರ್ಜಿ ಗ್ರಾಮ ಭಾಗಶಃ, ಬೇಟೋಳಿ ಗ್ರಾಮ ಪಂಚಾಯಿತಿಯ ಬೇಟೋಳಿ ಗ್ರಾಮ ಭಾಗಶಃ, ಕೆದಮುಳ್ಳೂರು ಗ್ರಾಮ ಪಂಚಾಯಿತಿಯ ಕೊಟ್ಟೋಳಿ ಗ್ರಾಮ ಭಾಗಶಃ ಮತ್ತು ಕದನೂರು ಗ್ರಾಮ ಪಂಚಾಯಿತಿಯ ಕದನೂರು ಗ್ರಾಮ ಭಾಗಶಃ ಪ್ರದೇಶಗಳನ್ನು ಸೇರಿಸಿಕೊಂಡು ವಿರಾಜಪೇಟೆ ಪುರಸಭೆಯನ್ನಾಗಿ ಮೇಲ್ದರ್ಜೆಗೆರಿಸಿ ಅಧಿಸೂಚನೆ ಹೊರಡಿಸಲಾಗಿದೆ. ಈ ಸಂಬಂಧ ಉಲ್ಲೇಖ(1)ರ ಅಧಿಸೂಚನೆಯನ್ನು ಮತ್ತು ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಡ್ ಪುನರ್ ವಿಂಗಡಣೆ ಮಾಡುವ ಬಗ್ಗೆ ಹೊರಡಿಸಿರುವ

ಮಾರ್ಗಸೂಚಿಯನ್ನು ಅನುಸರಿಸಿ ಉಲ್ಲೇಖ(3)ರಂತೆ ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ ಇವರು ವಿರಾಜಪೇಟೆ ಪುರಸಭೆಯ ವಾರ್ಡ್ ಗಳನ್ನು 2011ರ ಜನಗಣತಿಯ ಆಧಾರದ ಮೇರೆ ಪುನರ್ ವಿಂಗಡಣೆ ಮಾಡಲು ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಕರ್ನಾಟಕ ಪೌರಸಭೆಗಳ ಅಧಿನಿಯಮ-1964ರ ಪ್ರಕರಣ 13ರ ಮೇರೆಗೆ ವಿರಾಜಪೇಟೆ ಪುರಸಭೆಯ ವಾರ್ಡ್ ಗಳನ್ನು 2011ರ ಜನಗಣತಿಯನ್ನು ಆಧಾರಿಸಿ ಪುನರ್ ವಿಂಗಡಣೆ ಮಾಡಿ, ವಾರ್ಡಿನ ಹೆಸರು ಹಾಗೂ ವಾರ್ಡಿನ ವ್ಯಾಪ್ತಿಗೆ ಒಳಪಡುವ ಪ್ರದೇಶದ ವಿವರ ಮತ್ತು ಚೆಕ್ಕುಬಂದಿಗಳನ್ನು ವಿವರವಾಗಿ ನಮೂದಿಸಿ ಉಲ್ಲೇಖ(5)ರಂತೆ ಕರಡು ಅಧಿಸೂಚನೆ ಹೊರಡಿಸಿ, ಈ ಕರಡು ಅಧಿಸೂಚನೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಆಕ್ಷೇಪಣೆಯನ್ನು / ಸಲಹೆಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಅವಧಿಯಲ್ಲಿ ಸ್ವೀಕೃತವಾಗಿರುವ ಆಕ್ಷೇಪಣೆಯನ್ನು / ಸಲಹೆಗಳನ್ನು ಪರಿಗಣಿಸಿರುವುದರಿಂದ;

ಕರ್ನಾಟಕ ಪೌರಸಭೆಗಳ ಅಧಿನಿಯಮ-1964ರ ಪ್ರಕರಣ 13ರ ಮೇರೆಗೆ ವಿರಾಜಪೇಟೆ ಪುರಸಭೆಯ ವಾರ್ಡ್ ಗಳನ್ನು 2011ರ ಜನಗಣತಿಯನ್ನು ಆಧಾರಿಸಿ ಈ ಕೆಳಕಂಡಂತೆ ಪುನರ್ ವಿಂಗಡಣೆ ಮಾಡಿ, ವಾರ್ಡಿನ ಹೆಸರು ಹಾಗೂ ವಾರ್ಡಿನ ವ್ಯಾಪ್ತಿಗೆ ಒಳಪಡುವ ಪ್ರದೇಶದ ವಿವರ ಮತ್ತು ಚೆಕ್ಕುಬಂದಿಗಳನ್ನು ವಿವರವಾಗಿ ನಮೂದಿಸಿ ಅಧಿಸೂಚನೆ ಹೊರಡಿಸಿದೆ.

## ವಾರ್ಡ್ ಗಳ ವಿವರ

1. ನಗರ ಸ್ಥಳೀಯ ಸಂಸ್ಥೆ ಹೆಸರು : **ಪುರಸಭೆ, ವಿರಾಜಪೇಟೆ.**
2. ವಾರ್ಡ್ ಗಳ ಸಂಖ್ಯೆ : **23**

**ವಿರಾಜಪೇಟೆ ಪುರಸಭೆ ವ್ಯಾಪ್ತಿಯ ವಾರ್ಡ್ ಗಳ ವಿವರ ಮತ್ತು ಚೆಕ್ಕುಬಂದಿ ವಿವರ.**

| **ಕ್ರ. ಸಂ.** | **ವಾರ್ಡ್‌ನ ಹೆಸರು ಮತ್ತು ಸಂಖ್ಯೆ** | **ವಾರ್ಡ್‌ನ ಪ್ರದೇಶ ವ್ಯಾಪ್ತಿ (ಚೆಕ್ಕುಬಂದಿ)** |
|---|---|---|
| 1. | ವಿರಾಜಪೇಟೆ-1 (ಚರ್ಚ್ ರಸ್ತೆ) | ಅಸದುಲ್ಲಾ ಖಾನ್ ರವರ ಕಟ್ಟಡದಿಂದ ಎಡಕ್ಕೆ ಪ್ರಾರಂಭಿಸಿ ಮೂರ್ನಾಡು ರಸ್ತೆ ಛತ್ರಕೆರೆ ತಂಗುದಾಣದಿಂದ ಬಲಕ್ಕೆ ತಿರುಗಿ ಸಂತ ಅನ್ನಮ್ಮ ಶಾಲೆಯ ಎರಡು ಬದಿ ಸೇರಿ ಶಾಂತ ಚಿತ್ರ ಮಂದಿರದವರೆಗೆ, ಶಾಂತ ಚಿತ್ರಮಂದಿರದಿಂದ ಎಡಕ್ಕೆ ತಿರುಗಿ ರಾಮಯ್ಯನ (ಎರಡು ಬದಿ)ಮನೆಯವರೆಗೆ ಅಲ್ಲಿಂದ ದೇವಾಂಗ ಬೀದಿಬಲಭಾಗಕ್ಕಾಗಿ ಸಿದ್ದಾಪುರ ರಸ್ತೆ, ರಾಷ್ಟು ಬಂದು ಮನೆಗೆ ತಲುಪಿ ಅಲ್ಲಿಂದ ಬಲಕ್ಕೆ ತಿರುಗಿರಸ್ತೆಯ ಬಲಭಾಗಕ್ಕಾಗಿ ಪ್ರಾರಂಭದ ಅಸದುಲ್ಲಾಖಾನ್ ರವರ ಕಟ್ಟಡಕ್ಕೆ ಸೇರುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 05**<br>ಪಶ್ಚಿಮಕ್ಕೆ : ವಾರ್ಡ್ ನಂ**. 20**<br>ಉತ್ತರಕ್ಕೆ : ವಾರ್ಡ್ ನಂ**. 23**<br>ದಕ್ಷಿಣಕ್ಕೆ : ವಾರ್ಡ್ ನಂ**. 06** |
| 2. | ವಿರಾಜಪೇಟೆ -2 (ಅರಸುನಗರ) | ಅಪ್ಪಯ್ಯಸ್ವಾಮಿ ರಸ್ತೆ ಜೋಸೆಫ್ ಮನೆಯಿಂದ ತಿಮ್ಮಯ್ಯ ಲೇಔಟ್ ಜಂಕ್ಷನ್ ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಸಿ.ಸಿ ಚಂಗಪ್ಪ ರವರ ಮನೆಗಾಗಿ ಅರಸುನಗರ ಒಳಗೊಂಡಂತೆ ಮಗ್ಗುಲ ಗಡಿ ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ವಾರ್ಡ್ 03ರ ಗಡಿ ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಪಟ್ಟಡ |

| | | |
|---|---|---|
| | | ಮೋಹನ್ ಮನೆಗಾಗಿ ಮುಂದಕ್ಕೆ ಮಾಳೆಟೀರ ವಿಶು ಮನೆ ಒಳಗೊಂಡು ನೆಲ್ಲಮಕ್ಕಡ ಕುಟ್ಟಪ ರವರಲ್ಲಿಂದ ಹಾದೂ ಶಾಂತಿ ಜಯರಾಮ್ ಮನೆ ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಬಲಭಾಗದ ಮನೆಗಳನ್ನು ಒಳಗೊಂಡಂತೆ ಸುರೇಶ್ ತಲುಪಿ ಜೋಸೆಫ್ ಮನೆ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 03**<br>ಪಶ್ಚಿಮಕ್ಕೆ : ವಾರ್ಡ್ ನಂ**. 23**<br>ಉತ್ತರಕ್ಕೆ : **ಮಗ್ಗುಲ ಗಡಿ**<br>ದಕ್ಷಿಣಕ್ಕೆ : ವಾರ್ಡ್ ನಂ**. 05** |
| 3. | ವಿರಾಜಪೇಟೆ-3 (ಮಲೆತಿರಿಕೆ ಬೆಟ್ಟ) | ನೆಲ್ಲಮಕ್ಕಡ ಮೋಹನ್ ರವರ ಮನೆಯ ಮೇಲ್ಭಾಗದಿಂದ ಈಶ್ವರ ದೇವಸ್ಥಾನ ಗಡಿ ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಡೆಂಟಲ್ ಕಾಲೇಜು, ಅಯ್ಯಪ್ಪಬೆಟ್ಟ, ಮಲೆತಿರಿಕೆ ಬೆಟ್ಟ ಒಳಗೊಂಡಂತೆ ಉಷಾ ಪ್ರಿತುರವರ ಮನೆಯಿಂದ ಬಲಕ್ಕೆ ತಿರುಗಿ ಅರಳಿ ಮರ ಒಳಗೊಂಡಂತೆ ಸುಂಕದಕಟ್ಟೆ ಸಿದ್ದಾಪುರ ರಸ್ತೆ ಬಲಭಾಗದ ಎಸ್.ಬಿ.ಐ ಆನಂದ್ ಮನೆ ಒಳಗೊಂಡಂತೆ ನೆಲ್ಲಮಕ್ಕಡ ಮೋಹನ್ ರವರ ಮನೆ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 04**<br>ಪಶ್ಚಿಮಕ್ಕೆ : ವಾರ್ಡ್ ನಂ**. 02**<br>ಉತ್ತರಕ್ಕೆ : ಮಗ್ಗುಲ ಗಡಿ<br>ದಕ್ಷಿಣಕ್ಕೆ : ವಾರ್ಡ್ ನಂ**. 05** |
| 4. | ವಿರಾಜಪೇಟೆ-4 (ತೆಲುಗರಬೀದಿ) | ರೇಣುಕಾಚಾರ್ ರವರ ಮನೆಯಿಂದ ಹಾದು ಮಾರಿಯಮ್ಮ ದೇವಸ್ಥಾನ ಎಡಭಾಗದಿಂದ ಮಾಲೇಟಿರ ಅಪ್ಪಣ್ಣನವರ ಮನೆಗಾಗಿ ಮೇಕೆರಿರ ಪಾಲಿ ಮನೆ ಕಡೆಯಿಂದ ಎಡಕ್ಕೆ ತಿರುಗಿ ಅಜಯ್ ಸಿಂಗ್ ಮನೆಯವರೆಗೆ ಅಲ್ಲಿಂದ ಎಡಕ್ಕೆ ತಿರುಗಿ ಸ್ಮಶಾನ ಒಳಗೊಂಡಂತೆ ಕಟ್ಟಿ ಪೂಣಚ್ಚ ಮನೆ, ಅರಣ್ಯ ಇಲಾಖೆ ಕಛೇರಿ, ಪಂಪು ಕೆರೆ ಒಳಗೊಂಡಂತೆ ಮಗ್ಗುಲ ಗಡಿ ಚೋಕಂಡ ಮತ್ತು ಚೋವಂಡ ಮನೆಗಾಗಿ ಸಿದ್ದಾಪುರ ರಸ್ತೆ ಐಮಂಗಲ ಗಡಿ ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಸಿದ್ದಾಪುರ ರಸ್ತೆಗಾಗಿ ರೇಣುಕಾಚಾರ್ ಮನೆ ತಲುಪುವುದು.<br><br>ಪೂರ್ವಕ್ಕೆ : ಮಗ್ಗುಲ ಗಡಿ<br>ಪಶ್ಚಿಮಕ್ಕೆ : ವಾರ್ಡ್ ನಂ**. 03**<br>ಉತ್ತರಕ್ಕೆ : ಮಗ್ಗುಲ ಗಡಿ<br>ದಕ್ಷಿಣಕ್ಕೆ : ವಾರ್ಡ್ ನಂ**. 09** |
| 5. | ವಿರಾಜಪೇಟೆ-5 (ದಖ್ಖನಿ ಮೊಹಲ್ಲಾ) | ನೆಲ್ಲಮಕ್ಕಡ ಮೋಹನ್ ಮನೆಯ ಮುಂಭಾಗ ಲಯನ್ಸ್ ಪಾರ್ಕ್ ಒಳಗೊಂಡಂತೆ ಗೌರಿ ಮನೆಯಿಂದ ಬಲಕ್ಕೆ ಹಾದು ಎಲ್ಲಾ ಮನೆಗಳನ್ನು ಒಳಗೊಂಡಂತೆ ಅಂಗನವಾಡಿ ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಮಾರಿಯಮ್ಮ ದೇವಸ್ಥಾನ ಒಳಗೊಂಡಂತೆ, ಮುಂದಕ್ಕೆ ಸಿ.ಬಿ ಕುರಿಯನ್ ರವರ ಮನೆಗಾಗಿ ರಾಷ್ಟ್ರಬಂಧು ಪ್ರೆಸ್ ಮುಂಭಾಗ ಗುಜರಿ ಅಂಗಡಿಯನ್ನು ತಲುಪುದು, ಅಲ್ಲಿಂದ ಬಲಕ್ಕೆ ತಿರುಗಿ ದೇವಾಂಗ ಬೀದಿ ರಸ್ತೆಗಾಗಿ ಚಲಿಸಿ ಅಲ್ಲಿಂದ ಬಲಕ್ಕೆ ತಿರುಗಿ ಫೆಡರೇಶನ್ ಮಿಲ್ ಒಳಗೊಂಡಂತೆ ಯೋಗನಂದ ಮನೆಗೆ ತಲುಪುವುದು. ಅಲ್ಲಿಂದ ಬಲಕ್ಕೆ ದಖ್ಖನಿಮೊಹಲ್ಲಾದ ರಸ್ತೆಯ ಎಡ ಮತ್ತು ಬಲಭಾಗದ ಮನೆಗಳನ್ನುಒಳಗೊಂಡಂತೆ ಲಯನ್ಸ್ ಪಾರ್ಕ್ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 03**<br>ಪಶ್ಚಿಮಕ್ಕೆ : ವಾರ್ಡ್ ನಂ**. 01** |

| | | |
|---|---|---|
| | | ಉತ್ತರಕ್ಕೆ : ವಾರ್ಡ್ ನಂ**. 02**<br>ದಕ್ಷಿಣಕ್ಕೆ : ವಾರ್ಡ್ ನಂ**. 06** |
| 6. | ವಿರಾಜಪೇಟೆ-6<br>(ಜೈನರ ಬೀದಿ) | ರಾಜ್‌ಕುಮಾರ್ ಮನೆಯಿಂದ ಪಾರ್ಥ ಡ್ರಾಕ್ಟರ್ ಕ್ಲಿನಿಕ್ ಒಳಗೊಂಡಂತೆ ದೊಡ್ಡಟ್ಟಿ ಚೌಕಿ ತಲುಪಿ. ಅಲ್ಲಿಂದ ಮುಂದಕ್ಕೆ ಪ್ರಕಾಶ್ ಟವರ್ ಹಾದೂ ಎಫ್.ಎಂ.ಸಿ ರಸ್ತೆಯ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಬಾದಷ ಸ್ಟೋರ್ ತಲುಪುವುದು. ಅಲ್ಲಿಂದ ಮುಂದಕ್ಕೆ ಎಡಕ್ಕೆ ತಿರುಗಿ ಎಡಭಾಗದ ಮನೆಗಳನ್ನು ಒಳಗೊಂಡಂತೆ ಕೃಷ್ಣಸ್ಟೋರ್ ತಲುಪುದು. ಅಲ್ಲಿಂದ ಎಡಕ್ಕೆ ತಿರುಗಿ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣದ ತೋಡು ತಲುಪುವುದು ಅಲ್ಲಿಂದ ಎಡಕ್ಕೆ ತಿರುಗಿ ಮೋಹನ್ ಪೆಟ್ರೋಲ್ ಬಂಕ್ ತಲುಪಿ ಅಲ್ಲಿಂದ ಮುಂದಕ್ಕೆ ಅಝುಂ ಮಸೀದಿ ಹಾದೂ ಮುಂದಕ್ಕೆ ಕಾವೇರಿ ಕಲ್ಯಾಣ ಮಂಟಪದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಚಂದ್ರುರವರ ಮನೆ ತಲುಪುದು ಅಲ್ಲಿಂದ ರಾಜ್ ಕುಮಾರ್ ಮನೆ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 08**<br>ಪಶ್ಚಿಮಕ್ಕೆ : ವಾರ್ಡ್ ನಂ**. 17**<br>ಉತ್ತರಕ್ಕೆ : ವಾರ್ಡ್ ನಂ**. 01**<br>ದಕ್ಷಿಣಕ್ಕೆ : ವಾರ್ಡ್ ನಂ**. 10** |
| 7. | ವಿರಾಜಪೇಟೆ-7<br>(ಮೊಗರಗಲ್ಲಿ) | ಅನೂಪ್ ವರ್ಕ ಶಾಪ್ ಎಡಭಾಗ ಮನೆಗಳನ್ನು ಒಳಗೊಂಡಂತೆ ದರ್ಗ ತಲುಪಿ ಸಿ.ಕೆ ಮನೆ ಮುಂಭಾಗ ಎಡಕ್ಕೆ ತಿರುಗಿ ಮುಂದೆ ಎಡಭಾಗ ರಶೀದ್ ಮನೆಯನ್ನು ಒಳಗೊಂಡಂತೆ ಜಂಕ್ಷನ್‌ನ್ನು ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಅನೂಪ್ ವರ್ಕ್ ಶಾಪ್ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 08**<br>ಪಶ್ಚಿಮಕ್ಕೆ : ವಾರ್ಡ್ ನಂ**. 10**<br>ಉತ್ತರಕ್ಕೆ : ವಾರ್ಡ್ ನಂ**. 06**<br>ದಕ್ಷಿಣಕ್ಕೆ : ವಾರ್ಡ್ ನಂ**. 08** |
| 8. | ವಿರಾಜಪೇಟೆ-8<br>(ನೆಹರುನಗರ-1) | ಸಮೀ ಮನೆಯಿಂದ ಬಲಭಾಗದ ಎಲ್ಲಾ ಮನೆಗಳನ್ನು ಒಳಗೊಂಡು ತೋಡು ತಲುಪುದು. ಅಲ್ಲಿಂದ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡು ತಂಗಲ್ ರವರ ಮನೆ ತಲುಪಿ ಎಡಭಾಗದ ಮನೆಗಳನ್ನು ಒಳಗೊಂಡು ಆಗಸ್ಟಿನ್ ಮನೆ ತಲುಪಿ ಎಡಭಾಗದ ಕುಟ್ಟು ಹಾಜಿ ರವರ ತೋಟಕ್ಕೆ ತಿರುಗಿ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡು ಅಶೋಕ್ ರವರ ಮನೆ, ಪುರಸಭೆ ಟ್ಯಾಂಕ್ ನವರೆಗೆ ತಲುಪಿ ಅಲ್ಲಿಂದ ಶಾನುರವರ ಮನೆಯಿಂದ ಎಡಕ್ಕೆ ತಿರುಗಿ ಸಚ್ಚಿನ್ ರವರ ಮನೆಯ ಹಿಂಭಾಗದ ಜಾಗಕ್ಕಾಗಿ ಅಜಯ್ ರವರ ತೋಡು ತಲುಪುದು. ಅಲ್ಲಿಂದ ಎಡಕ್ಕೆ ಸಚ್ಚಿನ್ ರವರ ತೋಡಿಗಾಗಿ ಮುಂದಕ್ಕೆ ಸಿ.ಕೆ ಮನೆ ತಲುಪುದು. ಅಲ್ಲಿಂದ ಮುಂದಕ್ಕೆ ಭಾಸ್ಕರ್ ಮನೆಯ ಬಲಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಸಮೀ ಮನೆ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 09**<br>ಪಶ್ಚಿಮಕ್ಕೆ : ವಾರ್ಡ್ ನಂ**. 05**<br>ಉತ್ತರಕ್ಕೆ : ವಾರ್ಡ್ ನಂ**. 04**<br>ದಕ್ಷಿಣಕ್ಕೆ : ವಾರ್ಡ್ ನಂ**. 10** |
| 9. | ವಿರಾಜಪೇಟೆ-9<br>(ನೆಹರುನಗರ-2) | ಆಗಸ್ಟಿನ್ ಮನೆ ಹಿಂಭಾಗದಿಂದ ಮೊಯ್ದಿನ್ ಕುಟ್ಟಿ ತೋಟ ಹಾದು ಇ.ಬಿ.ಎಂ ಗಫೂರ್ ರವರ ಮನೆ ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ನೋಬಲ್ ನಾಸೀರ್ ರವರ ಮನೆ, ಬಷೀರ್ ಪ್ಲಾಟ್ ಒಳಗೊಂಡಂತೆ ಅಲ್ಲಿಯಾ ಎಲ್ಲಾ ಮನೆಗಳನ್ನು ಒಳಗೊಂಡು ಎಡಭಾಗದ ವಿದ್ಯಾನಗರದ ತೋಡು ಒಳಗೊಂಡಂತೆ ಸುಭಾಷ್ ನಗರ ತೋಡಿನ ಎಂ.ಹೆಚ್ ನಾಸೀರ್ ರವರ ಮನೆಯನ್ನು ಒಳಗೊಂಡಂತೆ ಎಡಭಾಗದ ಎಲ್ಲಾ ಮನೆ ಒಳಗೊಂಡು ಮಗ್ಗುಲ |

| | | |
|---|---|---|
| | | ಗಡಿಯ ಅಂಗನವಾಡಿ ತಲುಪುದು. ಅಲ್ಲಿಂದ ಎಡಭಾಗಕ್ಕೆ ತಿರುಗಿ ನೆಹರುನಗರ ಬೆಟ್ಟದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಎಡಭಾಗದಿಂದ ಹಾದೂ ಕುಟ್ಟು ಹಾಜಿ ತೋಟದಿಂದ ಆಗಸ್ಟಿನ್ ಮನೆ ತಲುಪುವುದು.<br><br>ಪೂರ್ವಕ್ಕೆ : **ಮಗ್ಗುಲ ಗಡಿ**<br>ಪಶ್ಚಿಮಕ್ಕೆ : ವಾರ್ಡ್ ನಂ**. 08**<br>ಉತ್ತರಕ್ಕೆ : ವಾರ್ಡ್ ನಂ**. 04**<br>ದಕ್ಷಿಣಕ್ಕೆ : ವಾರ್ಡ್ ನಂ**. 12** |
| 10. | ವಿರಾಜಪೇಟೆ-10 (ವಿದ್ಯಾನಗರ-01) | ಇಬ್ರಾಹೀಂ ಸಾಹೇಬ್ ಮನೆಯಿಂದ ಮುಂದಕ್ಕೆ ಸುಬ್ರಮಣಿ ಬಸ್ಸ್ ಡ್ರೈವರ್ ಸತ್ತಾರ್ ರವರ ಮನೆ ತಲುಪಿ ಮೇರಿ ಥೋಮಸ್ ಆಸ್ಪತ್ರೆ ತಲುಪುದು. ಅಲ್ಲಿಂದ ಮುಂದಕ್ಕೆ ಆತ್ರೇಯ ಆಸ್ಪತ್ರೆ, ಖಾಸಿಂ ಉಲುಮ್ ಮದರಸದ ಎಡಕ್ಕೆ ತಿರುಗಿ ಸಿಂಪ್ಲೆಕ್ಸ್ ಹೋಟೆಲ್ ಹಾದೂ ಮಂಜುನಾಥ್ ಹೋಟೆಲ್ ನಿಂದ ಸತ್ಯ ನಾರಾಯಣ ಅಂಗಡಿ ಮನೆ ತಲುಪುದು. ಅಲ್ಲಿಂದ ಎಡಕ್ಕೆ ತಿರುಗಿ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಟೆಲ್ಲರ್ ಮೊಯ್ದು ಮನೆಗೆ ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಪ್ರಗತಿ ಶಾಲೆಯ ಮುಖಾಂತರ ಹಾದೂ ಅಲ್ಲಿಂದ ಬಲಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಇಬ್ರಾಹೀಂ ಮನೆ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 08**<br>ಪಶ್ಚಿಮಕ್ಕೆ : ವಾರ್ಡ್ ನಂ**. 17**<br>ಉತ್ತರಕ್ಕೆ : ವಾರ್ಡ್ ನಂ**. 07**<br>ದಕ್ಷಿಣಕ್ಕೆ : ವಾರ್ಡ್ ನಂ**. 11** |
| 11. | ವಿರಾಜಪೇಟೆ-11 (ವಿದ್ಯಾನಗರ-02) | ಟೆಂಡರ್ ಚಿಕನ್ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಲಕ್ಷ್ಮೀ ಬೇಕರಿ ಮುಖಾಂತರ ಹಾದು ಕೆ.ಟಿ ಬಜಾರ್ ತಲುಪುವುದು. ಅಲ್ಲಿಂದ ಮುಂದಕ್ಕೆ ಎಡಕ್ಕೆ ತಿರುಗಿ ನಾರಾಯಣ ಮಾಸ್ಟರ್ ತೋಡು ತಲುಪುವುದು. ತೋಡಿನ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡೂ ಸೈನು ರವರ ಮನೆಯಿಂದ ಹಾದು ಮುಂದಕ್ಕೆ ಮೊಹಮ್ಮದ್ ಮನೆ ರವರ ಮುಖಾಂತರ ದೇವಮ್ಮಾಜಿ ಮನೆ ಹಾದು ಮುಂದಕ್ಕೆ ಕ್ರಿಶ್ಚಿಯನ್ ಪ್ರಾರ್ಥನ ಹಾಲ್ ಒಳಗೊಂಡಂತೆ ಬಲಭಾಗಕ್ಕೆ ತಿರುಗಿ ಎಡಪಾಲ ಮುಸ್ತಫರವರ ಮನೆಯಿಂದ ಬಲಭಾಗದ ಮನೆಗಳನ್ನು ಒಳಗೊಂಡು ಪಿ.ಎಂ ಅಬುಲ್ ರಹೀಂ ರವರ ಮನೆ ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಚಂದ್ರಶೇಖರ್ ರವರ ಮನೆಯನ್ನು ತಲುಪಿ ಸಾಲಿರವರ ಮರ ಮಿಲ್ಲಿನ ಮುಭಾಗದಿಂದ ಹಾದು ಟೆಂಡರ್ ಚಿಕನ್ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 09**<br>ಪಶ್ಚಿಮಕ್ಕೆ : ವಾರ್ಡ್ ನಂ**. 16**<br>ಉತ್ತರಕ್ಕೆ : ವಾರ್ಡ್ ನಂ**. 10**<br>ದಕ್ಷಿಣಕ್ಕೆ : ವಾರ್ಡ್ ನಂ**. 12** |
| 12. | ವಿರಾಜಪೇಟೆ-12 (ನಿಸರ್ಗ ಲೇಔಟ್) | ಬಿ.ಎಂ ಕುಮಾರ್ ರವರ ಮನೆಯಿಂದ ಮೇಲ್ಭಾಗದಿಂದ ಬಲಕ್ಕೆ ತಿರುಗಿ ಗಣಪತಿಬೀದಿ, ಕಾವೇರಿ ಲೇಔಟ್ ಎಲ್ಲಾ ಮನೆಗಳನ್ನು ಒಳಗೊಂಡಂತೆ ನಿಸರ್ಗ ಲೇಔಟ್ ಒಳಗೊಂಡಂತೆ ಚಾಮುಂಡಿ ಲೇಔಟ್ ಅಂಬಟ್ಟಿ ಗಡಿ ತಲುಪುವುದು. ಅಲ್ಲಿಂದ ಮುಂದಕ್ಕೆ ಕರ್ನಲ್ ತೋಟ ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಚಾತು ಅಂಗಡಿಯಿಂದ ಪೂಮಾಲೆ ಮನೆ ತಲುಪುವುದು. ಅಲ್ಲಿಂದ ಬಲಕ್ಕೆ ತಲುಪಿ ಅಲ್ಲಿಂದ ಸುಭಾಷ್‌ನಗರ ನಾಣಯ್ಯ ಮಾಸ್ಟರ್ ಮನೆಯಿಂದ ಬಲಕ್ಕ ತಿರುಗಿ ಅಲ್ಲಿಂದ ಧ್ರುವ ಲಾಯರ್ ಎಲ್ಲಾ ಮನೆಗಳನ್ನು ಒಳಗೊಂಡಂತೆ ಬಿ.ಎಂ ಕುಮಾರ್ ಮನೆ ತಲುಪುವುದು.<br><br>ಪೂರ್ವಕ್ಕೆ : **ಅಂಬಟ್ಟಿ ಗಡಿ**<br>ಪಶ್ಚಿಮಕ್ಕೆ : ವಾರ್ಡ್ ನಂ**. 11**<br>ಉತ್ತರಕ್ಕೆ : ವಾರ್ಡ್ ನಂ**. 09**<br>ದಕ್ಷಿಣಕ್ಕೆ : **ಅಂಬಟ್ಟಿ ಗಡಿ** |

| | | |
|---|---|---|
| 13. | ವಿರಾಜಪೇಟೆ-13 (ಕಲ್ಲು ಬಾಣೆ) | ಸರ್ವೋದಯ ಕಾಲೇಜಿನಿಂದ ಬಲಕ್ಕೆ ತಿರುಗಿ ಕಲ್ಲುಬಾಣೆಯ ಆರ್ಜಿ ಗಡಿ ತಲುಪಿ ಅಲ್ಲಿಂದ ಮರ್ವಿನ್ ಮನೆಗಾಗಿ ಮಂಜುನಾಥನಗರವನ್ನು ಒಳಗೊಂಡಂತೆ ಮಂಜುನಾಥ್ ಮೂರ್ತಿ ರವರ ಮನೆ ತಲುಪಿ ಅಲ್ಲಿಂದ ಬಲಭಾಗಕ್ಕೆ ತಿರುಗಿ ಸರ್ವೋದಯ ಕಾಲೇಜು ತಲುಪುವು .<br><br>ಪೂರ್ವಕ್ಕೆ : ವಾರ್ಡ್ ನಂ**. 12**<br>ಪಶ್ಚಿಮಕ್ಕೆ : ವಾರ್ಡ್ ನಂ**. 14**<br>ಉತ್ತರಕ್ಕೆ : ವಾರ್ಡ್ ನಂ**. 09**<br>ದಕ್ಷಿಣಕ್ಕೆ : ಆರ್ಜಿ ಗಡಿ |
| 14. | ವಿರಾಜಪೇಟೆ-14 (ಮಂಜುನಾಥ ನಗರ) | ವಲ್ಸನ್ ಮನೆಯಿಂದ ಬಲಕ್ಕೆ ತಿರುಗಿ ಎಂ.ಎಲ್.ಎ ಮನೆಗಾಗಿ ಹಾದೂ ಭಾರತ್ ಪೆಟ್ರೋಲ್ ಬ್ಯಾಂಕ್ ಅಲ್ಲಿಂದ ಬಲಕ್ಕೆ ತಿರುಗಿ ಆರ್ಜಿ ಗಡಿ ತಲುಪಿ ಶುಂಠಿ ಮನು ಮನೆಯವರೆಗೆ ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ವಿಜಯನಗರ ವಲ್ಸನ್ ಮನೆ ತಲುಪುವುದು<br><br>ಪೂರ್ವಕ್ಕೆ : ವಾರ್ಡ್ ನಂ**. 13**<br>ಪಶ್ಚಿಮಕ್ಕೆ : ವಾರ್ಡ್ ನಂ**. 18**<br>ಉತ್ತರಕ್ಕೆ : ವಾರ್ಡ್ ನಂ**. 15**<br>ದಕ್ಷಿಣಕ್ಕೆ : ಆರ್ಜಿ ಗಡಿ |
| 15. | ವಿರಾಜಪೇಟೆ-15 (ವಿಜಯನಗರ) | ಕೀತಿಯಂಡ ಮನೆಯಿಂದ ಎಡಕ್ಕೆ ತಿರುಗಿ ಶಂಕರ್ ಜ್ಯುವೆಲ್ಲರ್ ಮನೆಯ ರಸ್ತೆಯ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಲೀಮಾ ಮನೆ ತಲುಪುವು . ಅಲ್ಲಿಂದ ಕೆಳಭಾಗಕ್ಕೆ ತಲುಪಿ ಅಲ್ಲಿಂದ ವಿಜಯನಗರ ತೋಡಿನ ಎಡ ಮತ್ತು ಬಲಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಅಲ್ಲಿಂದ ಬಲಕ್ಕೆ ತಿರುಗಿ ವಿಜಯನಗರದ ಎಲ್ಲಾ ಮನೆಗಳನ್ನು ಒಳಗೊಂಡಂತೆ ತೋಡಿಗಾಗಿ ರಾಜೇಶ್ವರಿ ಚಿತ್ರ ಮಂದಿರ ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಕೀತಿಯಂಡ ಮನೆಯಿಂದ ಹಾದೂ ಶಂಕರ್ ಜ್ಯುವೆಲ್ಲರ್ ಮನೆ ತಲುಪುವು .<br><br>ಪೂರ್ವಕ್ಕೆ : ವಾರ್ಡ್ ನಂ**. 14**<br>ಪಶ್ಚಿಮಕ್ಕೆ : ವಾರ್ಡ್‌ನಂ**. 16**<br>ಉತ್ತರಕ್ಕೆ : ವಾರ್ಡ್ ನಂ**. 13**<br>ದಕ್ಷಿಣಕ್ಕೆ : ಅಂಬಟ್ಟಿಗಡಿ |
| 16. | ವಿರಾಜಪೇಟೆ-16 (ಸುಣ್ಣದಬೀದಿ) | ಗಾಯತ್ರಿ ಪೆಟ್ರೋಲ್ ಬಂಕ್‌ನಿಂದ ಕೆಳಬಾಗ ನಾಗರಾಜು ರವರ ಮನೆ ತಲುಪಿ ಆರ್ಜಿ ಗಡಿಯನ್ನು ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ತೋಡಿನ ಮೂಲಕ ಎಡಭಾಗದ ಮನೆಗಳನ್ನು ಒಳಗೊಂಡಂತೆ ಮಾಂಸ ಮಾರುಕಟ್ಟೆ ತಲುಪಿ ಅಲ್ಲಿಂದ ಮುಂದಕ್ಕೆ ಎಡಕ್ಕೆ ತಲುಪಿ ಎ.ಪಿ.ಜೆ ಅಬ್ದುಲ್ ಕಲಾಂ ರಸ್ತೆ ತಲುಪಿ ಶಾದಲಿ ಮಸೀದಿ ತಲುಪಿ ಅಲ್ಲಿಂದ ಮುಂದಕ್ಕೆ ಬದ್ರಿಯ ಜಂಕ್ಷನ್ ತಲುಪಿ ಅಲ್ಲಿಂದ ಎಡಕ್ಕೆ ಮುಖ್ಯರಸ್ತೆಯ ಎಡಭಾಗ ಮನೆಗಳನ್ನು ಒಳಗೊಂಡಂತೆ ಖಾಸಗಿ ಬಸ್ಸು ನಿಲ್ದಾಣ ತಲುಪಿ ಗಾಯತ್ರಿ ಪೆಟ್ರೋಲ್ ಬಂಕ್ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 15**<br>ಪಶ್ಚಿಮಕ್ಕೆ: ವಾರ್ಡ್‌ನಂ**. 18**<br>ಉತ್ತರಕ್ಕೆ : ವಾರ್ಡ್‌ನಂ**. 17**<br>ದಕ್ಷಿಣಕ್ಕೆ : ಆರ್ಜಿ ಗಡಿ |
| 17. | ವಿರಾಜಪೇಟೆ-17 (ಹರಿಕೇರಿ) | ಎಸ್.ಎಸ್.ಆರ್ ರಸ್ತೆಯಲ್ಲಿರುವ ಕಾಂಟಿನೆಂಟಲ್ ಕಟ್ಟಡದಿಂದ ಪ್ರಾರಂಭಿಸಿ ಕೆ.ಎಸ್.ಆರ್.ಟಿ.ಸಿ ಬಸ್ಸ ನಿಲ್ದಾಣದ ಶಾಂತಿನಗರ ತೋಡಿನವರೆಗೆ ತಲುಪುವುದು. ಅಲ್ಲಿಂದ ಎಡಭಾಗದಲ್ಲಿರುವ ಎಲ್ಲಾ ಮನೆಗಳನ್ನು ಒಳಗೊಂಡಂತೆ ಕೃಷ್ಣ ಸ್ಟೋರ್ ತಲುಪುವುದು. ಅಲ್ಲಿಂದ ಮುಖ್ಯರಸ್ತೆ ಎಡಕ್ಕೆ ತಿರುಗಿ ಫೆಡರೇಶನ್ ತಲುಪುವುದು. ಅಲ್ಲಿಂದ ಎಡಕ್ಕೆ ತಿರುಗಿ ಎ.ಪಿ.ಜೆ ಅಬ್ದುಲ್ ಕಲಾಂ ರಸ್ತೆಯ ಎಡಭಾಗದಲ್ಲಿರುವ (ಹರಿಕೇರಿ) ಎಲ್ಲಾ ಮನೆಗಳನ್ನು ಒಳಗೊಂಡಂತೆ ಅದೇ |

| | | |
|---|---|---|
| | | ರಸ್ತೆಯಲ್ಲಿ ಹಾದು ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಕಾಂಟಿನೆಂಟಲ್ ಕಟ್ಟಡವನ್ನುತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 10**<br>ಪಶ್ಚಿಮಕ್ಕೆ**:** ವಾರ್ಡ್ ನಂ**. 19**<br>ಉತ್ತರಕ್ಕೆ : ವಾರ್ಡ್ ನಂ**. 06**<br>ದಕ್ಷಿಣಕ್ಕೆ : ವಾರ್ಡ್ ನಂ**. 16** |
| 18. | ವಿರಾಜಪೇಟೆ-18 (ಮೀನುಪೇಟೆ) | ಮೀನುಪೇಟೆ ಗಾಯತ್ರಿ ಪೆಟ್ರೋಲ್ ಬಂಕ್ ಪಕ್ಕದ ರಸ್ತೆಯಲ್ಲಿ ಹಾದು ರಸ್ತೆಯ ಬಲಭಾಗದ ಮನೆಗಳನ್ನು ಒಳಗೊಂಡು ಆರ್ಜಿಗಡಿಯ ರಘುನಾಥ್ ರವರ ಮನೆಯನ್ನು ತಲುಪಿ ಅಲ್ಲಿಂದ ಮುಂದಕ್ಕೆ ತೋಡಿಗಾಗಿ ಹಾದು ಆರ್ಜಿ ಸೇತುವೆಯನ್ನು ತಲುಪುವುದು. ಅಲ್ಲಿಂದ ಕುಪ್ಪಂಡ ಮಾಡ ಹರೀಶ್ ರವರ ಮನೆದಾಟ ಬಲ್ಟಿ ಕಾಳಂಡ ಮೀನರವರ ಮನೆಗೆ ತಲುಪಿ ಅಲ್ಲಿಂದ ಮುಂದಕ್ಕೆ ಹಾದು ಪೋಲಿಸ್ ವಸತಿಗೃಹ ತಲುಪಿ ಅಲ್ಲಿಂದ ಮುನಿಸಿಪಾಲ್ ಶಾಲೆಯಿಂದ ಮುಂದಕ್ಕೆ ಗೌರಿ ಟ್ಯಾಂಕ್ ತಲುಪಿ ಶೆಟಿ ಬ್ರಾಂಡಿ ಶಾಪ್, ಹಿಲ್ ಪ್ಯಾಸೆಲ್ ಒಳಗೊಂಡು ಗಾಯತ್ರಿ ಪೆಟ್ರೊಲ್ ಬಂಕ್ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 14**<br>ಪಶ್ಚಿಮಕ್ಕೆ: ವಾರ್ಡ್ ನಂ**. 19**<br>ಉತ್ತರಕ್ಕೆ : ವಾರ್ಡ್ ನಂ**. 19**<br>ದಕ್ಷಿಣಕ್ಕೆ : ಬೇಟೋಳಿ ಗಡಿ |
| 19. | ವಿರಾಜಪೇಟೆ-19 (ಗೌರಿಕೆರೆ) | ಅಬುತಾಲಿಯ ಅಂಗಡಿಯಿಂದ (ಎಲೆ ಅಡಿಕೆ ಇಬ್ರಾಹೀಂ ರವರ ಅಂಗಡಿ) ಮುಖ್ಯರಸ್ತೆಯ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಮತೆ ಲಿಂಗಯ್ಯ ಒಣಿ ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಬ್ಲೂ ಬೆಲ್ ಮೋಹನ್ ರವರ ಮನೆಯನ್ನು ಒಳಗೊಂಡಮತೆ ಗಾಂಧಿನಗರ ರಸ್ತೆಯ ಎಡಭಾಗದ ಎಲ್ಲಾ ಮನೆಗಳನ್ನು ಒಳಗಂಡಂತೆ ಬೇಟೋಳಿ ಗಡಿ ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಅಂಬಿಕಾ ಲೇಔಟ್ ಒಳಗೊಂಡಂತೆ ಗೌರಿಕೆರೆಯ ಉಮಾವತಿ ಮನೆ, ನುಸ್ರುತುಲ್ ಉಲುಮ್ ಮದರಸದ ಎಡಭಾಗದ ಪಿ.ಡಿಓ ಮನೆ ತಲುಪಿ ಅಬುತಾಲಿಯ ಅಂಗಡಿ ತಲುಪುವುದು.<br><br>ಪೂರ್ವಕ್ಕೆ : ವಾರ್ಡ್ ನಂ**. 18**<br>ಪಶ್ಚಿಮಕ್ಕೆ : ವಾರ್ಡ್ ನಂ**. 20**<br>ಉತ್ತರಕ್ಕೆ : ವಾರ್ಡ್ ನಂ**. 01**<br>ದಕ್ಷಿಣಕ್ಕೆ : ಬೇಟೋಳಿ ಗಡಿ |
| 20. | ವಿರಾಜಪೇಟೆ-20 (ಗಾಂಧಿನಗರ) | ಲಿಂಗಯ್ಯ ಒಣಿಯಲ್ಲಿರುವ ಜಗದೀಶ್ ಬಸ್ಸ್ ಮಾಲೀಕ ಮೊಣ್ಣಪ್ಪನವರ ಕಟ್ಟಡದಿಂದ ಮುಖ್ಯರಸ್ತೆಯ ಎಡಭಾಗದಲ್ಲಿರುವ ಎಲ್ಲಾ ಮನೆಗಳನ್ನು ಒಳಗೊಂಡಂತೆ ಅಂಚೆ ಕಛೇರಿ ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಎಫ್.ಎಂ.ಸಿ ರಸ್ತೆಯ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಬಂಡಾರಿ ಕಟ್ಟಡಕ್ಕೆ ತಲುಪುವುದು ಅಲ್ಲಿಂದ ಎಡಕ್ಕೆ ತಿರುಗಿ ಮೂರ್ನಾಡು ರಸ್ತೆಯ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಹಾದು ಮುಂದಕ್ಕೆ ದೊಟ್ಟಮಠ ತಲುಪುವುದು. ಅಲ್ಲಿಂದ ಮುಂದಕ್ಕೆ ಬೇಟೋಳಿಗಡಿಗಾಗಿ ಕ್ರಿಸ್ಚನ್ ಕಾಲೋನಿ ತಲುಪಿ. ಅಲ್ಲಿಂದ ಮುಂಭಾಗದಲ್ಲಿ ಬರುವ ಸೇತುವೆ ತಲುಪಿ. ಅಲ್ಲಿಂದ ಅಮ್ಮುಣಿ ಕುಟ್ಟಂಡ ಕಟ್ಟಿ ವಸಂತರವರ ಮನೆ ತಲುಪುವುದು. ಅಲ್ಲಿಂದ ಮುಂದಕ್ಕೆ ನಡಿಕೇರಿಯಂಡ ತೋಟಕ್ಕಾಗಿ ಹಾದು ಕರ್ತಮಾಡ ಬೆಳ್ಳಿಯಪ್ಪರವರ ಮನೆ ಸೇರಿ ಅಲ್ಲಿಂದ ಗಾಂಧಿನಗರ ರಸ್ತೆ ಹಾದು ಗಾಂಧಿನಗರ ರಸ್ತೆಯ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಸರ್ಕಾರಿ ಆಸ್ಪತ್ರೆ ಒಳಗೊಂಡಂತೆ ಲಿಂಗಯ್ಯನ ಒಣಿಯ ಜಗದೀಶ್ ಬಸ್ಸ್ ಮಾಲೀಕ ಮೊಣ್ಣಪ್ಪರವರ ಕಟ್ಟಡ ತಲುಪುವುದು. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | |
|---|---|---|
| | | ಪೂರ್ವಕ್ಕೆ : ವಾರ್ಡ್ ನಂ. **19**<br>ಪಶ್ಚಿಮಕ್ಕೆ : ವಾರ್ಡ್ ನಂ. **21**<br>ಉತ್ತರಕ್ಕೆ : ವಾರ್ಡ್ ನಂ. **01**<br>ದಕ್ಷಿಣಕ್ಕೆ : ಬೇಟೋಳಿ ಗಡಿ |
| 21. | ವಿರಾಜಪೇಟೆ-21 (ಚಿಕ್ಕಪೇಟೆ) | ಮೂರ್ನಾಡು ರಸ್ತೆಯ ದೊಡ್ಡ ಮಠದ ಜಾಗದಿಂದ ಹಳೆ ಮರ ಮಳಿಗೆ ಒಳಗೊಂಡು ಛತ್ರಕೆರೆ ತಲುಪಿ ಅಲ್ಲಿಂದ ಮುಂದಕ್ಕೆ ಕಾರ್ಪೊರೇಷನ್ ಬ್ಯಾಂಕ್ ನಿಂದ ಗಿರಿಜಾ ರವರ ಅಂಗಡಿ ತಲುಪಿ ಅಲ್ಲಿಂದ ಮಾರ್ನಾಡು ರಸ್ತೆಯ ಹಾದೂ ರಸ್ತೆಯ ಎಡಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಕದನೂರು ಗಡಿ ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಗದ್ದೆಗಾಗಿ ಪಾಲೆಕಂಡ ಮನೆಯವರ ಗದ್ದೆಯನ್ನು ಒಳಗೊಂಡು ಮಂಡೆಪಂಡ ರವಿ ಮನೆ ತಲುಪುವುದು. ಅಲ್ಲಿಂದ ಮುಂದಕ್ಕೆ ಮಾಳೇಟ್ಟಿರ ಕಾವೇರಪ್ಪ, ಹೌಸಿಂಗ್ ಬೋರ್ಡ್ ಮನೆಗಳನ್ನು ಒಳಗೊಂಡಂತೆ ಬೀರಂಗಾಡು ಶ್ಯಾಮ್ ರವರ ಮನೆಯನ್ನು ಒಳಗೊಂಡು ತೋಡಿಗಾಗಿ ಬೇಟೋಳಿ ಗಡಿ ತಲುಪಿ ಮುಂದಕ್ಕೆ ದೊಡ್ಡ ಮಠ ಸೇರುವುದು.<br><br>ಪೂರ್ವಕ್ಕೆ : ವಾರ್ಡ್ ನಂ. **23**<br>ಪಶ್ಚಿಮಕ್ಕೆ : **ಬೇಟೋಳಿ ಗಡಿ**<br>ಉತ್ತರಕ್ಕೆ : ಕುಕ್ಲೂರು ಗಡಿ<br>ದಕ್ಷಿಣಕ್ಕೆ : ವಾರ್ಡ್ ನಂ. **20** |
| 22. | ವಿರಾಜಪೇಟೆ-22 (ಬೋಯಿಕೇರಿ) | ಪಾಲೆಕಂಡ ಮನೆಯಿಂದ ಕೆದಮುಳ್ಳೂರು ಗಡಿ ತಲುಪಿ ಅಲ್ಲಿಂದ ಗಡಿಗಾಗಿ ಬಲಕ್ಕೆ ತಿರುಗಿ ಕೋಡಿರ ಕಟ್ಟಿರವರ ಜಾಗಕ್ಕೆ ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಕದನೂರು ಗಡಿಗಾಗಿ ಹಾದೂ ಗಡಿಯಿಂದ ಬಲಕ್ಕೆ ತಿರುಗಿ ಕುಕ್ಲೂರು ಗಡಿ ಅಲ್ಲಿಂದ ಬಲಕ್ಕೆ ತಿರುಗಿ ಮಂಡೆಪಂಡ ರವಿ ಮನೆ ಪಾಲೆಕಂಡ ಮನೆ ತಲುಪುವು .<br><br>ಪೂರ್ವಕ್ಕೆ : ವಾರ್ಡ್ ನಂ. **21**<br>ಪಶ್ಚಿಮಕ್ಕೆ : ಕೆದಮುಳ್ಳೂರು ಗಡಿ<br>ಉತ್ತರಕ್ಕೆ : ಕುಕ್ಲೂರು **ಗಡಿ**<br>ದಕ್ಷಿಣಕ್ಕೆ : ವಾರ್ಡ್ ನಂ. **21** |
| 23. | ವಿರಾಜಪೇಟೆ-23 (ಶಿವಕೇರಿ) | ಮಾಳೇಟಿರ ಶ್ರೀನಿವಾಸ್ ರವರ ಮನೆಯ ಬಲಭಾಗದಿಂದ ಬಾಲಕಿಯರ ಪ್ರೌಢಶಾಲೆ ಹಾದೂ ಮುಂದಕ್ಕೆ ಮೂರ್ನಾಡು ರಸ್ತೆಯಲ್ಲಿ ಹಾದೂ ಮೂರ್ನಾಡು ರಸ್ತೆಯ ಬಲಭಾಗದ ಎಲ್ಲಾ ಮನೆಗಳನ್ನು ಒಳಗೊಂಡಂತೆ ಮೈಕ್ರೋ ವೇವ್ ಜಂಕ್ಷನ್ ತಲುಪುವುದು. ಅಲ್ಲಿಂದ ಮುಂದಕ್ಕೆ ಮೂರ್ನಾಡು ರಸ್ತೆಯ ಬಲಬಾಗದಲ್ಲಿ ಹಾದೂ ಕುಕ್ಲೂರು ಗಡಿಯನ್ನು ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ತೋಡಿಗಾಗಿ ಹಾದೂ ಒಂಟಿ ಅಂಗಡಿ ರಸ್ತೆ ತಲುಪುವುದು. ಅಲ್ಲಿಂದ ಬಲಕ್ಕೆ ತಿರುಗಿ ಕುಕ್ಲೂರು ಗಡಿ ತಲುಪಿ ಅಲ್ಲಿಂದ ಮುಂದಕ್ಕೆ ಬಲಕ್ಕೆ ತಿರುಗಿ ಶಿವಕೇರಿ, ಕೀರ್ತಿ ಲೇಔಟ್ ಒಳಗೊಂಡಂತೆ ಮುಂದಕ್ಕೆ ಅಪ್ಪಯ್ಯಸ್ವಾಮಿ ರಸ್ತೆ, ಹೊಸ ಬಡಾವಣೆ, ಕಲ್ಲುಕೊರೆ ಒಳಗೊಂಡಂತೆ ತಿಮ್ಮಯ್ಯ ಲೇಔಟ್ ಜಂಕ್ಷನ್ ತಲುಪಿ, ತಿಮ್ಮಯ್ಯ ಒಳಗೊಂಡಂತೆ ತೋಡಿಗಾಗಿ ಹಾದೂ ಮೂರ್ನಾಡು ರಸ್ತೆಯ ಮಾಳೇಟಿರ ಶ್ರೀನಿವಾಸ್ ರವರ ಮನೆಯ ತಲುಪುವುದು.<br><br>ಪೂರ್ವಕ್ಕೆ : ಕುಕ್ಲೂರು ಗಡಿ<br>ಪಶ್ಚಿಮಕ್ಕೆ : ವಾರ್ಡ್ ನಂ. **21**<br>ಉತ್ತರಕ್ಕೆ : ಕುಕ್ಲೂರು ಗಡಿ<br>ದಕ್ಷಿಣಕ್ಕೆ : ವಾರ್ಡ್ ನಂ. **02** |

**ಜಿಲ್ಲಾಧಿಕಾರಿ,**
**ಕೊಡಗು ಜಿಲ್ಲೆ, ಮಡಿಕೇರಿ.**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಮೈಸೂರು.

VIJAY
NELAMANGALA
MUNIDALAPPA
Digitally signed by VIJAY NELAMANGALA MUNIDALAPPA